<u>ವನ್ಯಜೀವಿ ಸಪ್ತಾಹ–2022 ದ ಪ್ರಯುಕ್ತ ಪಿಲಿಕುಳದಲ್ಲಿ ವಿವಿಧ ಸ್ಪರ್ಧೆಗಳು</u>

ವನ್ಯಜೀವಿ ಸಪ್ತಹ – 2022 ರ ಅಂಗವಾಗಿ 02.10.2022 ರಂದು ಪಿಲಿಕುಳದಲ್ಲಿ “ಪ್ರಕೃತಿ ಮತ್ತು ವನ್ಯಜೀವಿ” ವಿಷಯದ ಮೇಲೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

1) ವನ್ಯಜೀವಿ ಛಾಯಾಚಿತ್ರ ಸ್ಪರ್ಧೆ:

ವನ್ಯಜೀವಿ ಛಾಯಾಚಿತ್ರ ಸ್ಪರ್ಧೆಯಲ್ಲಿ ಭಾಗವಹಿಸುವವರು 4”×6” ಅಳತೆಗಿಂತ ಕಡಿಮೆಯಾಗದಂತೆ ವನ್ಯಜೀವಿ ಛಾಯಚಿತ್ರಗಳನ್ನು ತಾರೀಕು 30–09–2022ರ ಒಳಗಾಗಿ ಕಳುಹಿಸತಕ್ಕದ್ದು. ತಾರೀಕು 02–10–2022 ರಂದು ಎಲ್ಲಾ ಛಾಯಾಚಿತ್ರಗಳನ್ನು ಪ್ರದರ್ಶಿಸಲಾಗುವುದು. ಸ್ಪರ್ಧೆ ಎಲ್ಲಾ ಛಾಯಾಚಿತ್ರಕಾರರಿಗೆ ತೆರೆದಿರುತ್ತದೆ

2) ಹಿರಿಯ ಹಾಗೂ ಕಿರಿಯ ಪ್ರಾಥಮಿಕ, ಪ್ರೌಢಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿ ಪ್ರಬಂಧ ಸ್ಪರ್ಧೆ

ಪ್ರಬಂಧವು 1500 ಅಕ್ಷರಗಳಿಗೆ ಮೀರದಂತೆ ಕನ್ನಡ ಅಥವಾ ಇಂಗ್ಲಿಷನಲ್ಲಿ ಬರೆದು ತಾ:30.09.2022ರ ಒಳಗಾಗಿ ಕೆಳಗಿನ ವಿಳಾಸಕ್ಕೆ ಅಂಚೆ ಮೂಲಕ ಅಥವಾ ವ್ಯೈಯಕ್ತಿಕವಾಗಿ ಕಳುಹಿಸಬೇಕು.

3) ಹಿರಿಯ ಹಾಗೂ ಕಿರಿಯ ಪ್ರಾಥಮಿಕ, ಪ್ರೌಢಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿ ಕೊಲಾಜ್ ಸ್ಪರ್ಧೆ

ಕೊಲಾಜ್ ತಾರೀಕು 30–09–2022 ಒಳಗಾಗಿ ಕಳುಹಿಸಬೇಕು.

4) ಹಿರಿಯ ಹಾಗೂ ಕಿರಿಯ ಪ್ರಾಥಮಿಕ, ಪ್ರೌಢಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿ
ಚಿತ್ರಕಲಾ ಮತ್ತು ಛದ್ಮವೇಷ ಸ್ಪರ್ಧೆ

ತಾರೀಕು 02–10–2022 ರಂದು ಚಿತ್ರಕಲಾ ಮತ್ತು ಛದ್ಮವೇಷ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವ ವಿದ್ಯಾರ್ಥಿಗಳು ಬೇಕಾದ ಸಾಮಾಗ್ರಿಯನ್ನು ತಾವೇ ತರತಕ್ಕದ್ದು. ಹಾಳೆಯನ್ನು ಸ್ಥಳದಲ್ಲೇ ನೀಡಲಾಗುವುದು.

**5) ಹಿರಿಯ ಪ್ರಾಥಮಿಕ, ಪ್ರೌಡಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಆವಾಸಸ್ಥಾನ ಮಾದರಿ ಸ್ಪರ್ಧೆ:** ತಾರೀಕು 02.10.2022 ರಂದು ಆವಾಸಸ್ಥಾನ ಮಾದರಿ ಸ್ಪರ್ಧೆ ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವ ವಿದ್ಯಾರ್ಥಿಗಳು ಬೇಕಾದ ಸಾಮಾಗ್ರಿಯನ್ನು ತಾವೇ ತರತಕ್ಕದ್ದು.

ಎಲ್ಲಾ ಛಾಯಾಚಿತ್ರಗಳು, ಕೊಲಾಜ್, ಪ್ರಬಂಧಗಳು ನಿರ್ದೇಶಕರು, ಪಿಲಿಕುಳ ಜೈವಿಕ ಉದ್ಯಾನವನ, ಮೂಡುಶೆಡ್ಡೆ, ಮಂಗಳೂರು–575028 ವಿಳಾಸಕ್ಕೆ ಅಂಚೆ ಮೂಲಕ ಅಥವಾ ವ್ಯೈಯಕ್ತಿಕವಾಗಿ ಕಳುಹಿಸಬಹುದು. ವಿದ್ಯಾರ್ಥಿಗಳ ಹೆಸರು, ಅಂಚೆ ವಿಳಾಸ, ವಿದ್ಯಾಸಂಸ್ಥೆ ಹೆಸರು, ಸಂಪರ್ಕ ದೂರವಾಣಿ ಸಂಖ್ಯೆಯನ್ನು ಪ್ರತ್ಯೇಕ ಹಾಳೆಯಲ್ಲಿ ನಮೂದಿಸಬೇಕು.

ಹೆಚ್ಚಿನ ಮಾಹಿತಿಗಾಗಿ, ಸಂಪರ್ಕಿಸಿ:

ದೂರವಾಣಿ: **0824-2263300, + 91 9845175757**

ವೆಬ್ಸೈಟ್–www.pilikulazoo.com

ಇನ್ ಷ್ಟಗ್ರಾಮ: pilikulazoomangalore

ಇಅಂಚೆ: pilikulaoutreach@gmail.com

ಹೆಚ್.ಜೆ ಭಂಡಾರಿ
ನಿರ್ದೇಶಕರು
ಪಿಲಿಕುಳ ಜೈವಿಕ ಉದ್ಯಾನವನ
ಮಂಗಳೂರು